ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 29 ಡಿವಿಪಿ(2) 2019

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:04-06-2020.

ಸುತ್ತೋಲೆ

ವಿಷಯ: 2020-21ನೇ ಸಾಲಿಗೆ ನವದೆಹಲಿಯ ಎಐಸಿಟಿಇಯ ಮಾನ್ಯತೆ ಪಡೆದ ರಾಜ್ಯದಲ್ಲಿ ಹಾಲಿ ಇರುವ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಿಗೆ ರಾಜ್ಯ ಸರ್ಕಾರದ ಮಾನ್ಯತೆ ಪಡೆಯುವ ಬಗ್ಗೆ.

ಉಲ್ಲೇಖ : 2020-21ನೇ ಸಾಲಿಗೆ ಪಾಲಿಟೆಕ್ನಿಕ್‌ಗಳಿಗೆ ಎಐಸಿಟಿಇ ಯು ನೀಡಿರುವ ಅನುಮೋದನೆ ಮಾಹಿತಿಯನ್ನು ಸಲ್ಲಿಸುವ ಕುರಿತು.

~******~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನವದೆಹಲಿಯ ಎಐಸಿಟಿಇಯ ಮಾರ್ಗಸೂಚಿಗಳನ್ವಯ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಿಂದ 2020-21ನೇ ಸಾಲಿಗೆ ನವದೆಹಲಿಯ ಎಐಸಿಟಿಇಯ ಮಾನ್ಯತೆ ವಿಸ್ತರಣೆಯನ್ನು ಪಡೆಯಲು ಆನ್‌ಲೈನ್ ಅರ್ಜಿಯನ್ನು ಸಲ್ಲಿಸಿರುವುದು ಸರಿಯಷ್ಟೆ. ಈ ಪಾಲಿಟೆಕ್ನಿಕ್‌ಗಳಿಗೆ ಎಐಸಿಟಿಇಯು ಪಾಲಿಟೆಕ್ನಿಕ್‌ಗಳ ವೆಬ್‌ಪೋರ್ಟಲ್‌ನಲ್ಲಿ ಅನುಮೋದನೆಯನ್ನು ವಿಸ್ತರಿಸಿ ಆದೇಶ (AICT E's extension of Approval letter EOA for 2020-21) ನೀಡುತ್ತಿರುವುದಾಗಿ ತಿಳಿದು ಬಂದಿರುತ್ತದೆ. ಸದರಿ ಆದೇಶವನ್ನು ಡೌನ್‌ಲೋಡ್ ಮಾಡಿ ದೃಢೀಕರಿಸಿ **ಐದು** ಪ್ರತಿಗಳನ್ನು ಹಾಗೂ Soft Copyಯನ್ನು ಈ ಕೆಳಕಂಡ ಈ-ಮೇಲ್ ವಿಳಾಸಕ್ಕೆ ಸಲ್ಲಿಸಲು ಮತ್ತು ಇದರ ಜೊತೆಗೆ AICTE's extension of Approval letter for 2019-20ರ ಒಂದು ಪ್ರತಿಯನ್ನು ಸಹ ಕೂಡಲೇ ನಿರ್ದೇಶನಾಲಯಕ್ಕೆ ತಲುಪಿಸಬೇಕಾಗಿ ಸೂಚಿಸಲಾಗಿದೆ.

E-mail - dte.dvp2@gmail.com

ನವದೆಹಲಿಯ ಎಐಸಿಟಿಇಯ ಮಾನ್ಯತೆ ಪಡೆದ ಪಾಲಿಟೆಕ್ನಿಕ್‌ಗಳಿಗೆ ರಾಜ್ಯ ಸರ್ಕಾರದ ಮಾನ್ಯತೆಯನ್ನು ಪಡೆಯಲು ಹಾಗೂ ಕೋರ್ಸ್‌ವಾರು ಪ್ರವೇಶಾತಿಯನ್ನು ನಿಗಧಿಪಡಿಸಿ ಆದೇಶ ಹೊರಡಿಸುವಂತೆ ಕೋರಿ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಬೇಕಾಗಿರುತ್ತದೆ. ಆದ್ದರಿಂದ ನಿಮ್ಮ ಪಾಲಿಟೆಕ್ನಿಕ್‌ಗೆ 2020-21ನೇ ಸಾಲಿಗೆ ಎಐಸಿಟಿಇ ಯ ಅನುಮೋದನೆ ಪಡೆದಿರುವ **ಐದು** ದೃಢೀಕೃತ ಪ್ರತಿಗಳನ್ನು [duly attested by the Principal] ಹಾಗೂ Soft Copyಯನ್ನು ಕೂಡಲೇ ನಿರ್ದೇಶನಾಲಯಕ್ಕೆ ಕಳುಹಿಸಲು ಈ ಮೂಲಕ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು

ಇವರಿಗೆ

1. ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ.

ಪ್ರ: ಇಲಾಖೆಯ ಇ-ಗವರ್ನೆನ್ಸ್ ರವರಿಗೆ ಸೂಕ್ತ ಕ್ರಮಕ್ಕಾಗಿ.